SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

Online Newspaper Clipping Service
**Dtd-Friday, 08th, June- 2018**

THE HINDU



# RGUHS unearths nursing degree scam

STAFF REPORTER
BENGALURU

The Rajiv Gandhi University of Health Sciences (RGUHS) has come out with a 1,200-page report on fake nursing degrees allegedly awarded by a Bengaluru-based private nursing college.

Sources said that this report points to the existence of a huge racket and a decision will be taken on Friday at the varsity's syndicate meeting on the way forward.

Sources said that they have found fake nursing degree certificates and other documents involving not just the Bengaluru college, but also others. "This includes forged nursing degrees and fabrication of other documents," a source said.

The university has submitted details to the Malleswaram police and lodged a complaint against the college. The forgery came to light after it was learnt that an Iranian student claimed that she had been cheated by a nursing college in Nandini Layout.

The university formed a team to inspect the college, following which they unearthed the scam.

# ರಾಜ್ಯಕ್ಕೆ 2410 ವೈದ್ಯ ಸೀಟು ಖೋತಾ

## ಕಾಲೇಜುಗಳಲ್ಲಿ ಸೌಲಭ್ಯ ಕೊರತೆ

ಬೆಂಗಳೂರು: ವೈದ್ಯಕೀಯ ವ್ಯಾಸಂಗದ ಕನಸು ಕಾಣುತ್ತಿರುವ ರಾಜ್ಯದ ಸಾವಿರಾರು ವಿದ್ಯಾರ್ಥಿಗಳಿಗೆ ಆಘಾತಕರ ಸುದ್ದಿಯೊಂದು ಕಾದಿದೆ. ಈಗಾಗಲೇ ಅಸ್ತಿತ್ವದಲ್ಲಿದ್ದು, ಮೂಲಭೂತ ಸೌಲಭ್ಯದ ಕೊರತೆ ಎದುರಿಸುತ್ತಿರುವ 8 ವೈದ್ಯಕೀಯ ಕಾಲೇಜುಗಳ ಮುಂದುವರಿಕೆಗೆ ಸಂಬಂಧಿಸಿದ ಪುನರ್ ನವೀಕರಣ ಪತ್ರವನ್ನು ಕೊಡಲು ಹಾಗೂ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ 8 ಕಾಲೇಜುಗಳಿಗೆ ಮಂಜೂರಾತಿ ಪತ್ರ ನೀಡಲು ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ನಿರಾಕರಿಸಿರುವುದೇ ಈ ಸುದ್ದಿಯ ಸಾರಾಂಶವಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿರುವ ದಾಖಲೆಗಳ ಪ್ರಕಾರ ಮಂಜೂರಾತಿ ಪಡೆದು ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ 8 ವೈದ್ಯಕೀಯ ಕಾಲೇಜುಗಳು ಅತ್ಯಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಹೊಂದುವಲ್ಲಿ ಸಂಪೂರ್ಣ ವಿಫಲವಾಗಿವೆ. ಹೀಗಾಗಿ 2018-19ನೇ ಸಾಲಿನಲ್ಲಿ ಅವುಗಳನ್ನು ಮುಂದುವರಿಸುವುದಕ್ಕೆ ಸಂಬಂಧಿಸಿದ ಪುನರ್ ನವೀಕರಣ ಪತ್ರವನ್ನು ನೀಡಲು ಸಾಧ್ಯವಿಲ್ಲವೆಂದು ಎಂಸಿಐ ರಾಜ್ಯ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿದೆ. ಇದರಿಂದಾಗಿ ಕನಿಷ್ಠ 1210 ವೈದ್ಯಕೀಯ ಸೀಟುಗಳನ್ನು ರಾಜ್ಯ ಕಳೆದುಕೊಳ್ಳಲಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಆದರೆ ಹಲವು ಶಿಕ್ಷಣ ತಜ್ಞರ ಪ್ರಕಾರ ಎಂಸಿಐನ ಕಠಿನ ನಿಲುವಿನಿಂದಾಗಿ ರಾಜ್ಯಕ್ಕೆ ಕನಿಷ್ಠ 2410 ವೈದ್ಯ ಸೀಟುಗಳು ಕೈತಪ್ಪಲಿವೆ. ಈಗಾಗಲೇ ಅಸ್ತಿತ್ವದಲ್ಲಿರುವ 8 ಕಾಲೇಜುಗಳಲ್ಲೇ 1210 ಸೀಟುಗಳು ಇವೆ ಹಾಗೂ ಹೊಸದಾಗಿ ಪ್ರಾರಂಭವಾಗಬೇಕಾಗಿದ್ದ ಇತರೆ 8 ಕಾಲೇಜುಗಳಲ್ಲಿ ಹೆಚ್ಚುಕಡಿಮೆ ಅಷ್ಟೇ ಸೀಟುಗಳು ಇರುತ್ತವೆ. ಒಟ್ಟು 16 ಕಾಲೇಜುಗಳಲ್ಲಿ ಹೆಚ್ಚಿನವು ಸರ್ಕಾರಿ ಕಾಲೇಜುಗಳಾದರೆ, ಕೆಲವು ಮಾತ್ರ ಖಾಸಗಿ ಮಾಲೀಕತ್ವಕ್ಕೆ ಸೇರಿವೆ. ಈ ಎಲ್ಲಾ ಕಾಲೇಜುಗಳಲ್ಲಿ ಪ್ರಮುಖ ಬೋಧಕ ವರ್ಗ ಹಾಗೂ ಬೋಧಕೇತರ ಸಿಬ್ಬಂದಿ ಕೊರತೆ ವಿಪರೀತವಾಗಿದೆ. ಅಷ್ಟೇ ಅಲ್ಲ, ಅತ್ಯವಶ್ಯವಾದ ಆಸ್ಪತ್ರೆಯ ಸೌಲಭ್ಯ ಕೂಡಾ ಸರಿಯಾಗಿ ಇಲ್ಲ. ಹಣಕಾಸಿನ ಲಭ್ಯತೆ ವಿಷಯದಲ್ಲೂ ಸ್ಪಷ್ಟತೆ ಇಲ್ಲ. ಇವೆಲ್ಲ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುವ ಎಂಸಿಐ ತನ್ನದೇ ಆದ ನಿರ್ಧಾರಕ್ಕೆ ಬಂದಿದ್ದು ಅದನ್ನು ಕೇಂದ್ರ ಆರೋಗ್ಯ ಸಚಿವಾಲಯದ ಗಮನಕ್ಕೆ ತಂದಿದೆ.

ಸರ್ಕಾರಿ ಸ್ವಾಮ್ಯದ ಕೊಪ್ಪಳ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಕೆಐಎಂಎಸ್) ಪುನರ್ ನವೀಕರಣ ಪತ್ರ ನಿರಾಕರಿಸಲ್ಪಟ್ಟಿರುವ ಸರ್ಕಾರಿ ಕಾಲೇಜುಗಳಲ್ಲಿ ಪ್ರಮುಖವೆನಿಸಿದೆ. ಬೆಂಗಳೂರಿನ ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು, ವಿಜಯಪುರ, ಕೋಲಾರ, ತುಮಕೂರುಗಳಲ್ಲಿನ ವೈದ್ಯಕೀಯ ಕಾಲೇಜುಗಳಿಗೂ ಬಿಸಿತಟ್ಟಿದೆ. ತನ್ಮಧ್ಯೆ ಸೇಂಟ್ ಜಾನ್ಸ್ ಸೇರಿದಂತೆ ಕೆಲವು ಕಾಲೇಜುಗಳು ಎಂಸಿಐನ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಲು ಯೋಚಿಸಿವೆ. ಆದರೆ ಇನ್ನು ಕೆಲವು ವೈದ್ಯ ಕಾಲೇಜುಗಳು ಬರುವ ಆಗಸ್ಟ್ ತಿಂಗಳ ಹೊತ್ತಿಗೆ ಎಂಸಿಐ ಮಂಜೂರಾತಿ ಹಾಗೂ ಪುನರ್ ನವೀಕರಣಪತ್ರ ನೀಡಬಹುದೆಂಬ ಆಶಾಭಾವನೆ ಹೊಂದಿವೆ.